ಪಟ್ಟಗೆ ಮಡಚಿದ ತೊಡೆದೇವನ್ನು ಎದುರಿಗಿಟ್ಟು ತುಪ್ಪದ ಗಿಂಡಿಯನ್ನೇ ಬಗ್ಗಿಸಿದರೂ ಒಂದೂ ಮೆಚ್ಚುಗೆಯ ಮಾತು ಕೇಳದಾಯಿತು. ಸದಾ ಬೇರೆಯವರ ಮನೆಯ ಅಡುಗೆಯೇ ಹೊಗಳಿಕೆಯ ಸ್ಥಾನವನ್ನು ಭರಿಸಿದಾಗ ಬದುಕು ತಾಳ ತಪ್ಪುತ್ತಿದೆಯೆನಿಸಿತು. ಬೆಂಕಿಯ ಕಾವಿಗೆ ಕಾಯುವ ಗಾಜಿನ ಬಳೆಯಿಂದ ಬಿದ್ದ ಕೈಮೇಲಿನ ಬರೆಯನ್ನೂ ಲೆಕ್ಕವಿಡುವವರಿಲ್ಲದಾಗ ಬಾಳು ಸಪ್ಪೆಯೆನಿಸಿತು. ಬಚ್ಚಿಡುವ ರಾತ್ರಿಯನ್ನು ನೆನೆದಾಗ ಈ ತೊಡೆದೇವಿನ ಗಡಿಗೆಯನ್ನೇ ಎತ್ತಿ ಜರಿಯಬೇಕೆನಿಸಿತು. ಆದರೂ 'ಅತ್ತೆ ಮಾವರಿಗಂಜಿ, ಸುತ್ತೇಳು ನೆರೆಗಂಜಿ, ಮತ್ತೆ ಆಳುವ ದೊರೆಗಂಜಿ...' ನೆನಪಾಗಿ ತಣ್ಣಗೆ ಹರಿವ ಕಾಲದೊಂದಿಗೆ ತಾನೂ ಹರಿಯತೊಡಗಿದಳು ಕಲಾವತಿ.



ಬರಬರುತ್ತ ತೊಡೆದೇವಿನ ಒಲೆಯ ಬೆಂಕಿಯ ಕಾವು, ಕಾದ ಗಡಿಗೆಯ ಕಾವು, ಸುಡುವ ಬಳೆಯ ಕಾವು ಹೆಚ್ಚಿದಂತೆಲ್ಲ ತಾಯ ತೌರಿನ ತಂಪು ಕರೆಯತೊಡಗಿತು. ಎಷ್ಟೇ ಮನಸ್ಸನ್ನು ಕಟ್ಟಿದರೂ ಕಾಲನ್ನು ಕಟ್ಟಲಾಗುತ್ತಿರಲಿಲ್ಲ. ಒಂದು ದಿನ ಎದ್ದು ನಡೆದು ಬಿಡುತ್ತಿದ್ದಳು ಕಲಾವತಿ. ಇದಾಗಿ ಎಂಟೋ ಹತ್ತೋ ದಿನಕ್ಕೆ ಕಲಾವತಿ ಅಪ್ಪನೊಂದಿಗೆ ತಲೆ ತಗ್ಗಿಸಿ ಬರುವುದು, ಗಂಡನ ಮನೆಯಲ್ಲಿ ಇಂತಹದ್ದೊಂದು ರಾಜಿ ಪಂಚಾಯತಿ ನಡೆಯುವುದು ಈ ಎರಡು ಮೂರು ವರ್ಷದಿಂದ ಖಾಯಂ ಆಗಿತ್ತು.

ಮತ್ತೆ ಕರುವಿನ ಕರೆಯನ್ನು ಕೇಳಿ ಮುಖಕ್ಕೆ ನೀರು ಹನಿಸಿ ಸೆರಗಿನಿಂದೊರಸಿ ಉಗುಬಗೆಯಿಂದ ಅಡಿಯಿಡುತ್ತಿರುವಾಗ ಎದುರಾದ ವ್ಯಕ್ತಿ, 'ನೋಡು ಕಲಾವತಿ, ನೀನೇ ಹೊಂದ್ಕ್ಯಂಡು ಹೋಗವು. ಬಾಳ್ವೆ ಎಂದರೆ ಮತ್ತೆಂತದು? ಯಂಗನು ಮತ್ತೆಮತ್ತೆ ಬಪ್ಪದು ಚಂದರ್‍ತಿಲ್ಲೆ. ಕಂಡವಾರು ಏನ್ ಅಂದಕಳವು? ಗಂಡಸರು ಹ್ಯಾಂಗೇ ಇರಲಿ. ನಿನ್ನ ಬದುಕು ಕಟ್ಕ್ಯಳದು ನಿನ್ನ ಕೈಲಿ ಇದ್ದು ನೋಡು. ಯಂಗೂ ಬತ್ತೋ್ಯ'

'ಅಡ್ಡಿಲ್ಯೋ ಮಾಬ್ಲ ಮಾವಾ, ಯಂಗರು ಇದು ಬೇಕಿತ್ತನ? ಯನ್ ಕೈಲಾದಷ್ಟು ಹೊಂದಿಕ್ಯಂಡೇ ಹೋಗ್ತಿದ್ದಿ ಆನು. ನೀ ಒಂದು ಉಪಕಾರ ಮಾಡವು ನಂಗೆ. ನಿಮ್ಮನೆ ಅತ್ತೆ ಹತ್ರ ಕೇಳಿ ಯಂಗೆ ಇದಕ್ಕೊಂದು ಔಷಧಿ ತಂದು ಕೊಡವು ನೀನು. ಹಗಲೂ ರಾತ್ರಿ ಶೆರ್ಕ ಬತ್ತೋ ಯಂಗೆ. ಜೀವ ಕೈಯಲ್ಲಿ ಕಟ್ಕ್ಯಂಡು ಕೆಲಸ ಮಾಡ್ತಿ' ಎಂದು ಮಾತು ತುಂಡರಿಸಿದ ಕಲಾವತಿ ಒಮ್ಮೆಲೆ ತನ್ನ ಸೀರೆಯನ್ನೆತ್ತಿ ಬಲತೊಡೆಯನ್ನು ತೋರಿಸಿದಳು.

ಸಿಗರೇಟಿನ ಸುಟ್ಟಗಾಯಗಳಿಂದ ರಕ್ತ-ರಸಿಗೆ ಒಸರುತ್ತಿರುವ ಕಪ್ಪು ಗಡ್ಡೆಗಟ್ಟಿದ ಕಲಾವತಿಯ ತೊಡೆಯನ್ನು ಕಂಡ ಮಹಾಬಲ ಭಟ್ಟರಿಗೆ ಕಣ್ಣು ಕತ್ತಲಿಟ್ಟಂತಾಗಿ ಕಂಗಾಲಾದರು. ಏನೂ ಆಡಲು ತೋಚದೆ ಸುಬ್ಬಣ್ಣನ ಹಗಲಿನಂತಿರದ ರಾತ್ರಿಯ ವಿಕೃತಿ ಕಣ್ಣಿಗೆ ಕಟ್ಟಿದಂತಾಯಿತು. ಎದುರಾದ ಕಲಾವತಿಯ ಮಾವನನ್ನು ನೋಡಿ, 'ಎಲ್ಲ ಸರಿನೂ ಕಲಾವತಿ ಹತ್ರಾನೇ ಹೊಂದ್ಕ್ಯಂಡು ಹೋಗು ಅನ್ನೋದು ಯಂಗ್ಳದ್ದು ಬಾರಿ ತಪ್ಪಾಗ್ತಾ' ಎಂದವರೆ ಮಾತಿಗೂ ನಿಲ್ಲದೆ ಹೊರಟೇ ಬಿಟ್ಟರು.

ಸರಗೋಲನ್ನು ಸರಿಸಿ ದಾಟುವಾಗ ಒಮ್ಮೆ ತಾಳಲಾರದೆ ತಿರುಗಿ ನೋಡಿದರು. ತೊಡೆ ಸವರದಂತೆ ಸಾವಕಾಶ ಸೀರೆಯನ್ನು ಕೆಳಗೆ ಬಿಡುವ ಕಲಾವತಿಯ ಮುಖದ ನೋವಿನ ಯಾತನೆಯನ್ನು ಗಮನಿಸಿದಾಗ ಕರುಳು ಕಿವುಚಿದಂತಾಯಿತು. ಮತ್ತೆಂದೂ ನೋಡಲಾರದಂತೆ ಕಣ್ಣು ಕಿತ್ತರು.

ಬೋರಲಾದ ಗಡಿಗೆ ಹೊತ್ತ ತೊಡೆದೇವಿನ ಒಲೆಯಲ್ಲಿ ಕಂಡೂ ಕಾಣದ ಕೆಂಡವೊಂದು ಕೆಂಪಡರುತ್ತಿತ್ತು. ●